# ಬಾಡೋಜ

ಹನುಮಯ್ಯ ಕಾಯಿಲೆ ಬಿದ್ದುದನ್ನು ಸುತ್ರಾಮ್ ಒಪ್ಪದ ಮಾದೇವಿ, ತನ್ನ ಗಂಡನದ್ದು ಆಸ್ಪತ್ರೆಗೆ ಸಂಬಂಧಿಸಿದ ಕಾಯಿಲೆ ಅಲ್ಲ ಇದೇನಿದ್ರುವೆ ದೇವ್ರು, ದಿಂಡ್ರುದು ಎಂದೇ ನಂಬಿದ್ದಳು. ಅದಕ್ಕಾಗಿ ತಾನೇ ಪೂಜಿಕೊಂಡಿದ್ದ ಕರ್ಯಮ್ಮನ ಗುಡಿಗೆ ಹಾಕ್ಯಂಡು 'ಇದು ಆಸ್ಪತ್ರೆದು ಅನ್ನದಾದ್ರೆ ಎಡಕ್ಕೊಡು, ಮಾಟ ಮಂತ್ರುದ್ದು ಅನ್ನೊದಾದ್ರೆ ಬಲಕ್ಕೊಡು' ಅಂತ ಹೂವು ಮುಡಿಸಿ ಅದು ಉದ್ರತಕ ಕಾದಿದ್ಕಂಡು, 'ನೋಡ್ದ ದಿಟ್ವಂತೆ ಬಲಗಡಿಕೆ ಕೊಡ್ತು' ಅಂತವ ಕಂಡಕಂಡರ್ನ ಬೈಕಂಡು ದೇವುಸ್ಥಾನ್ದಲ್ಲೆ ಆಕ್ಯಂಡು ಕಾಲ ತಳ್ತಿದ್ಲು. ಅದೇ ದೇವಸ್ಥಾನದ ಪಡಸಾಲೆಲಿ ಹನುಮಯ್ಯ ಒಂದಿನ ಪ್ರಾಣ ಬಿಟ್ಟ ನಂತರ, ಅವನ ತಿಥಿ ಅತ್ತ ಹನ್ನೊಂದು ದಿನಕ್ಕೆ ಏರ್ಪಟ್ಟಿತು. ಮಾದೇವಿ ತಾನೇ ಸಾಕಿಕೊಂಡಿದ್ದ ಎರಡು ಓತಗಳನ್ನು ಗಂಡನ ತಿಥಿಗೆಂದು ಕೊಡಬೇಕಾಗಿ ಬಂತು. ಉಳಿದ ಸಾಮಾನು– ಸರಂಜಾಮುಗಳನ್ನ ಬೆಂಗಳೂರಿನಲ್ಲಿದ್ದ ಮಗ ಮಂಜ ಹೊಂಚಿ ಅಪ್ಪನ ಆರಾಧನೆಯನ್ನ ನಾಲ್ವರು ಮೆಚ್ಚುವಂತೆ ಮಾಡಲು ತೀರ್ಮಾನಿಸಿದ್ದ.

